ಪಠಣ ಕುತೂಹಲ

**ಎಂ.ಎಸ್. ಶ್ರೀರಾಮ್**



# ಚೂರಿಯಂಚಿನ ಬದುಕು

ಸಾವಿನಂಚಿನಲ್ಲಿದ್ದ, ಉಸಿರಾಡಲು ಸಾಧ್ಯವಾಗದೇ ವೆಂಟಿಲೇಟರಿನ ಮೇಲಿದ್ದ ಸಲ್ಮಾನ್ ರಶ್ದಿ ಪೂರ್ತಿ ಮರಮ್ಮತ್ತಾಗಿ, ಎಲ್ಲ ಭಾಷಾ ಪ್ರತಿಭೆ, ನೆನಪು, ಕಾವ್ಯ, ಪ್ರೀತಿ, ಸಾಹಿತ್ಯದೊಂದಿಗೆ ವಾಪಸ್ಸಾಗಿದ್ದಾರೆ.

'ಒಂದು ಬಂದೂಕನ್ನು ದೂರದಿಂದ ಉಪಯೋಗಿಸಬಹುದು. ಒಂದು ಗುಂಡು, ಕೊಲೆಗಾರ ಮತ್ತು ಅಸುನೀಗಿದವನ ಮಧ್ಯೆ ಒಂದು ಮಾರಕ ಸೇತುವೆಯಾಗಬಹುದು. ಬಂದೂಕಿನಿಂದ ಹಾರುವ ಗುಂಡು ದೂರದಿಂದ ಸಿಡಿಯುತ್ತದೆ. ಆದರೆ, ಚೂರಿ ಸಮೀಪದಿಂದ ಪ್ರಯೋಗಿಸುವ ಆತ್ಮೀಯತೆಯ ಮಾರಕಾಸ್ತ್ರ- ಅದರಿಂದಾಗುವ ಅಪರಾಧಗಳು ಹತ್ತಿರದ ಮುಖಾಮುಖಿಯ ಆತ್ಮೀಯ ಅಪರಾಧಗಳು. 'ಸೂಳೇ ಮಗನೇ ಇಲ್ಲೀದ್ದೀನಿ. ನಿನಗಾಗಿ ಕಾಯ್ತಿದ್ದೀನಿ. ನಿನಗೆ ನಾನು ಕಾಣ್ತಿದ್ದೀನಾ. ನಿನಗೆ ಮುಖಾಮುಖಿಯಾಗಿದ್ದೀನಿ. ಈ ಹರಿತವಾದ ಅಂಚನ್ನು ನಿನ್ನ ಕತ್ತಿನೊಳಕ್ಕೆ ತೂರಿಸ್ತಿದ್ದೀನಿ. ತಟ್ಟಿತಾ? ಇಲ್ಲಿ. ಇನ್ನಷ್ಟು. ಮತ್ತಷ್ಟು. ನಾನಿಲ್ಲೇ ಇದ್ದೀನಿ. ನಿನಗೆ ಮುಖಾಮುಖಿಯಾಗಿ' ಎನ್ನುತ್ತಾ ಚೂರಿ ತನ್ನ ಅಸ್ತಿತ್ವವನ್ನು ಸಾರುತ್ತದೆ'.

–ಸಲ್ಮಾನ್ ರಶ್ದಿ

ಆಗಸ್ಟ್ 12, 2022ರಂದು ಭಾರತ ಸಂಜಾತ ವಿಶ್ವವಿಖ್ಯಾತ ಲೇಖಕ ಸಲ್ಮಾನ್ ರಶ್ದಿಯ ಮೇಲೆ ಮಾರಕ ಹಲ್ಲೆ ನಡೆಯಿತು. ಒಬ್ಬ ಯುವಕ ರಶ್ದಿಯನ್ನು ಅನೇಕ ಬಾರಿ ಚೂರಿಯಿಂದ ಇರಿದ. ಅಲ್ಲಿಂದ ರಶ್ದಿಯನ್ನು ಹೆಲಿಕಾಪ್ಟರಿನಲ್ಲಿ ಆಸ್ಪತ್ರೆಗೆ ಒಯ್ಯಲಾಯಿತು. ಹಲ್ಲೆಯ ತೀವ್ರತೆ ಎಷ್ಟಿತ್ತೆಂದರೆ, ರಶ್ದಿ ಉಳಿಯಬಹುದೆನ್ನುವ ನಂಬಿಕೆ ಯಾರಿಗೂ ಇರಲಿಲ್ಲ. ಆದರೆ, ರಶ್ದಿ ಈ ಹಲ್ಲೆಯಲ್ಲಿ ಬಚಾವಾಗಿ ಬದುಕಿ ಉಳಿದರಲ್ಲದೆ, 2024ರ ವೇಳೆ ಆ ಅನುಭವದ ಬಗ್ಗೆ ಒಂದು ಪುಸ್ತಕವನ್ನು ಬರೆಯುವಷ್ಟು ಚೇತರಿಸಿಕೊಂಡರು. ಸ್ವಲ್ಪಮಟ್ಟಿನ ಕೋಪ, ಕ್ರೋಧವಿದ್ದರೂ, ಒಟ್ಟಾರೆ ಪುಸ್ತಕ ಒಬ್ಬ ಲೇಖಕ ತನ್ನದೇ ಅನುಭವವನ್ನು ಬೇರೊಬ್ಬರ ಅನುಭವದಂತೆ ಹೊರನಿಂತು ವಿವರಿಸುವ ಚಿಂತನಾ ವಿಧಾನ ಮತ್ತು ಸ್ಥಿತಪ್ರಜ್ಞತೆಯನ್ನು ತೋರುತ್ತದೆ.

ಸಾವನ್ನು ಸಮೀಪದಿಂದ ನೋಡಿದವರು ಅದನ್ನೊಂದು ಆಧ್ಯಾತ್ಮಿಕ